1421(1601) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ)ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದ ರೈತರ ಬಡ್ಡಿ ಮನ್ನಾ ಮಾಡಿದೆಯೇ? ಮಾಡಿದ್ದಲ್ಲಿ ಯಾವ ವರ್ಷದ್ದಾಗಿರುತ್ತದೆ.

ಆ) ಬಡ್ಡಿ ಮನ್ನಾ ಮಾಡಿದ ಹಣವನ್ನು ಸರ್ಕಾರ ಎಸ್.ಎನ್.ಎನ್ ಬ್ಯಾಂಕುಗಳಿಗೆ ಜಮಾ ಮಾಡಿದೆಯೇ?

ಇ) ಕುಂದಗೋಳ ತಾ:ವಿ.ಎಸ್.ಎಸ್ ಬ್ಯಾಂಕುಗಳಿಗೆ ಬಡ್ಡಿ ಮೊತ್ತ ರೂ.09.00 ಕೋಟಿ ಸರ್ಕಾರ ತುಂಬಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಬಂದಿದ್ದಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ಹೌದು 2002ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಅಲ್ಪಾವಧಿ ಕೃಷಿ ಸಾಲಗಳಿಗೆ ಅನ್ವಯವಾಗುತ್ತದೆ. ಅಲ್ಲದೆ ಕೆ.ಸಿ.ಸಿ ಬ್ಯಾಂಕಿಗೆ ಅನ್ವಯವಾಗುವ 2003ರ ವಿಶೇಷ ಪ್ಯಾಕೇಜಿನ ಪ್ರಕಾರ ಇರುತ್ತದೆ.

ಆ) ಹೌದು, 2002ನೇ ಸಾಲಿನ ಬಾಬ್ತು.

ಇ) ಹೌದು ಕುಂದಗೋಳ ತಾಲೂಕಿನ 28 ವಿ.ಎಸ್.ಎಸ್ ಬ್ಯಾಂಕುಗಳಿಗೆ 2002ನೇ ಸಾಲಿನ ಮುಂಗಾರು ಹಾಗು ಹಿಂಗಾರು ಅಲ್ಪಾವಧಿ ಸಾಲಗಳ ಮೇಲಿನ ಬಡ್ಡಿ ಮನ್ನಾ ರಕಂ ರೂ.05.40 ಲಕ್ಷಗಳನ್ನು ಈ ಸಂಘಗಳಿಗೆ ಈಗಾಗಲೇ ಜಮಾ ಮಾಡಿರುತ್ತದೆ. ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸುಸ್ತಿ ಸಾಲಗಳ (ದಿನಾಂಕ:30.06.2003ಕ್ಕೆ) ವಸೂಲಾತಿ ನಂತರ ಬಡ್ಡಿ ಮನ್ನಾ ಬಾಬ್ತು ರೂ.08.36 ಕೋಟಿ ಈ ತಾ.ವಿ.ಎಸ್.ಎಸ್.ಗಳಿಗೆ ಪಾವತಿಸಲು ಬಾಕಿ ಇರುತ್ತದೆ. ಈ ಪೈಕಿ ಸರ್ಕಾರವು ಶೇಕಡ 50 ರಷ್ಟು ಮೊತ್ತವನ್ನು ಬಿಡುಗಡೆ ಮಾಡಲು ಬಾಕಿ ಇದ್ದು ಉಳಿದ ಶೇಕಡ25 ರಷ್ಟನ್ನು ಅಪೆಕ್ಸ್ ಬ್ಯಾಂಕು ಹಾಗೂ ಶೇ.25 ರಷ್ಟನ್ನು ಕೆ.ಸಿ.ಸಿ ಬ್ಯಾಂಕು ನೀಡಲು ಬಾಕಿ ಇರುತ್ತದೆ.

ಈ) ಹಣ ಬಿಡುಗಡೆ ಪ್ರಸ್ತಾವವು ಆರ್ಥಿಕ ಇಲಾಖೆಯಲ್ಲಿರುತ್ತದೆ.

1422(1602) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು?

ಆ) ಮಕ್ಕಳ ಅಭಿವೃದ್ಧಿಗಾಗಿ ಇರುವ ವಿಶೇಷ ಯೋಜನೆಗಳು ಯಾವುವು?

ಇ) ಮಕ್ಕಳ ಅಭಿವೃದ್ಧಿಗಾಗಿ ಸರ್ಕಾರ ವೆಚ್ಚ ಮಾಡುವ ಹಣ ಎಷ್ಟು?

ಶ್ರೀಮತಿ. ಭಾಗೀರಥಿ ಮರುಳಸಿದ್ದನಗೌಡ ಮಹಿಳಾ ಮಕ್ಕಳ ಕಲ್ಯಾಣ ಸಚಿವರು::

ಅ) 39,795

ಆ) ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.